# ISKCON SRI JAGANNATH MANDIR

## ಇಸ್ಕಾನ್ ಶ್ರೀ ಜಗನ್ನಾಥ ಮಂದಿರ

**ನಂ.5, ಶ್ರೀಪುರಂ, 1ನೇ ಅಡ್ಡರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020. ☎ : 23565708**

**email : vibhav.krishna.jps@pamho.net**

**ಶಿಕ್ಷಾ ಕಾರ್ಯಕ್ರಮ**

ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘದ ಸ್ಥಾಪಕ ಆಚಾರ್ಯರಾದ ಶ್ರೀ ಶ್ರೀಮದ್ ಎ.ಸಿ.ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ಭಗವದ್ಗೀತ ಯಥಾರೂಪ ಕೃತಿಯ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ –

**ತಸ್ಮಾತ್ ಸರ್ವೇಷು ಕಾಲೇಷು ಮಾಂ ಅನುಸ್ಮರ ಯುದ್ಧ್ಯಚ ।**
**ಮಯ್ಯರ್ಪಿತ ಮನೋಬುದ್ಧಿಃ ಮಾಮೇವೈಷ್ಯಸಿ ಅಸಂಶಯಃ ॥**

" ಆದ್ದರಿಂದ ಅರ್ಜುನನೆ, ನೀನು ಯಾವಾಗಲೂ ನನ್ನನ್ನು ಕೃಷ್ಣ ರೂಪದಲ್ಲಿ ಸ್ಮರಿಸುತ್ತಿರು. ಅದೇ ಸಮಯಕ್ಕೆ ನಿನ್ನ ನಿರ್ದಿಷ್ಟ ಕರ್ತವ್ಯವಾದ ಯುದ್ಧವನ್ನು ಮಾಡು. ನಿನ್ನ ಚಟುವಟಿಕೆಗಳನ್ನು ನನಗೆ ಅರ್ಪಿಸುವುದರಿಂದ, ನಿನ್ನ ಮನಸ್ಸು ಮತ್ತು ಬುದ್ಧಿಗಳನ್ನು ನನ್ನಲ್ಲಿ ನೆಲೆಗೊಳಿಸುವುದರಿಂದ ನೀನು ಸಂದೇಹವೇ ಇಲ್ಲದೆ ನನ್ನನ್ನು ಪಡೆಯುವೆ ". ( ಭ.ಗೀ.**8.7** )

ಕೇವಲ ಕೃಷ್ಣನನ್ನು ನೆನೆಯುತ್ತಿರಬೇಕು. ತನ್ನ ವೃತ್ತಿಯನ್ನು ಬಿಟ್ಟುಬಿಡಬಹುದು ಎಂದು ಕೃಷ್ಣನು ಅರ್ಜುನನಿಗೆ ಹೇಳಲಿಲ್ಲ. ಭಗವಂತನು ಎಂದಿಗೂ ವಾಸ್ತವವಾಗಿ ಅಸಾಧ್ಯವಾದುದನ್ನು ಹೇಳುವುದಿಲ್ಲ. ಈ ಭೌತಜಗತ್ತಿನಲ್ಲಿ ದೇಹವನ್ನು ಪಾಲಿಸುವ ಸಲುವಾಗಿ ವ್ಯಕ್ತಿಯು ಕೆಲಸ ಮಾಡಬೇಕಾಗುತ್ತದೆ. ಮಾನವ ಸಮುದಾಯವನ್ನು ಕಾರ್ಯಚಟುವಟಿಕೆಯ ಆಧಾರದ ಮೇಲೆ ನಾಲ್ಕು ಸಾಮಾಜಿಕ ವಿಭಾಗಗಳಾಗಿ ವರ್ಗೀಕರಿಸಿದೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು. ಬ್ರಾಹ್ಮಣರು ಅಥವಾ ಬುದ್ಧಿಜೀವಿಗಳು ಒಂದು ತೆರನಾಗಿ ಕೆಲಸ ಮಾಡುತ್ತಿದ್ದರೆ, ಕ್ಷತ್ರಿಯ ಅಥವಾ ಆಡಳಿತೀಯ ವರ್ಗವು ಬೇರೊಂದು ರೀತಿಯಲ್ಲಿ, ವೈಶ್ಯರು ಅಥವಾ ವಣಿಕ ವರ್ಗ ಮತ್ತೊಂದು ಬಗೆಯಲ್ಲಿ ಕೆಲಸ ಮಾಡುತ್ತಾರೆ. ಕಾರ್ಮಿಕ, ವರ್ತಕ, ಆಡಳಿತಗಾರ ಅಥವಾ ರೈತ ಅಥವಾ ಅತ್ಯುನ್ನತ ವರ್ಗಕ್ಕೆ ಸೇರಿದವನಾಗಿ, ಸಾಹಿತಿಯೋ, ವಿಜ್ಞಾನಿಯೋ, ತತ್ವಜ್ಞಾನಿಯೋ ಆದರೂ ಅವನು ಜೀವನೋಪಾಯಕ್ಕಾಗಿ ದುಡಿಯಲೇಬೇಕು. ಆದ್ದರಿಂದ ಭಗವಂತನು ಅರ್ಜುನನಿಗೆ, ವೃತ್ತಿಯನ್ನು ತೊರೆಯಬೇಕಾಗಿಲ್ಲ ಎಂದು ಹೇಳುತ್ತಾನೆ ; ಆದರೆ ವೃತ್ತಿನಿರತನಾಗಿರುವಾಗಲೇ ಕೃಷ್ಣನನ್ನು ಸ್ಮರಿಸುತ್ತಿರಬೇಕು ( ಮಾಂ ಅನುಸ್ಮರ ) ಎಂದು ಹೇಳುತ್ತಾನೆ. ಜೀವಿಕೆಗಾಗಿ ಹೋರಾಡುತ್ತಾ ಕೃಷ್ಣನ ಸ್ಮರಣೆಯನ್ನು ಅಭ್ಯಾಸ ಮಾಡಿಕೊಳ್ಳದೆ ಹೋದರೆ, ಅವನಿಗೆ ಮರಣಸಮಯದಲ್ಲಿ ಕೃಷ್ಣಸ್ಮರಣೆ ಸಾಧ್ಯವಾಗುವುದಿಲ್ಲ. ಚೈತನ್ಯ ಮಹಾಪ್ರಭುಗಳು ಇದನ್ನೇ ಹೇಳುತ್ತಾರೆ .... ಆದ್ದರಿಂದ ನಾವು ಸದಾ ಕಾಲವೂ, ದಿನದ ಇಪ್ಪತ್ನಾಲ್ಕು ಗಂಟೆಯೂ, ಅವನ ನಾಮಗಳನ್ನು ಜಪಿಸುತ್ತಾ, ಅವನನ್ನು ನೆನೆಯುವುದಕ್ಕೆ ಹೊಂದುವಂತೆ ನಮ್ಮ ಬದುಕಿನ ಚಟುವಟಿಕೆಗಳನ್ನು ರೂಪಿಸಿಕೊಂಡು ಭಗವಂತನನ್ನು ಸ್ಮರಿಸುವುದನ್ನು ಅಭ್ಯಾಸಮಾಡಬೇಕು ".

ಪ್ರತಿಯೊಬ್ಬನೂ ತನ್ನ ಜೀವಮಾನದಲ್ಲಿ ಕೃಷ್ಣಪ್ರಜ್ಞೆಯನ್ನು ಅಭ್ಯಾಸ ಮಾಡುವುದು, ಭಗವಾನ್ ಕೃಷ್ಣನ ಭಕ್ತಿಸೇವೆಯಲ್ಲಿ ನಿರತನಾಗುವುದು ನಿಸ್ಸಂಶಯವಾಗಿ ಬಹಳ ಮುಖ್ಯ. ಕೃಷ್ಣಪ್ರಜ್ಞೆಯ ವಿಶೇಷ ಸ್ವಾರಸ್ಯವೆಂದರೆ, ನೀವು ಎಷ್ಟು ಮಟ್ಟಿಗೆ ಸಿದ್ಧರಾಗಿದ್ದೀರೋ ಅಷ್ಟುಮಟ್ಟಿಗೆ ಭಕ್ತಿಸೇವೆಯ ಚಟುವಟಿಕೆಗಳಲ್ಲಿ ತೊಡಗಬಹುದು. ಏಕೆಂದರೆ ಕೃಷ್ಣನೇ ಭಗವದ್ಗೀತೆಯಲ್ಲಿ ಹೀಗೆ ಭರವಸೆ ಕೊಡುತ್ತಾನೆ – " ಈ ಪ್ರಯತ್ನದಲ್ಲಿ ಕೊರತೆಯೆಂಬುದಾಗಲಿ ನಷ್ಟವೆಂಬುದಾಗಲಿ ಇಲ್ಲವೇ ಇಲ್ಲ. ಈ ಪಥದಲ್ಲಿ ಅತಿ ಸ್ವಲ್ಪ ಮುಂದುವರಿದರೂ ಸಾಕು, ಅತ್ಯಂತ ಭಯಾನಕವಾದ ಅಪಾಯದಿಂದ ಅದು ರಕ್ಷಿಸುತ್ತದೆ". ಆದ್ದರಿಂದ ನಿಮ್ಮ ಅನುದಿನದ ಬದುಕಿಗೆ ಕೃಷ್ಣನನ್ನು ತಂದುಕೊಳ್ಳಿರಿ. ಬೇಗನೆಯೇ ಅದರ ಲಾಭವನ್ನು ನೀವು ಪಡೆಯುವಿರಿ.

ಬದ್ಧತೆಯ ವಿವಿಧ ಹಂತಗಳನ್ನು, ಮನೆಯಲ್ಲಿ ಮಾಮೂಲು ಕೆಲಸಗಳನ್ನು ಮಾಡುತ್ತಲೇ ಆಚರಿಸಬಹುದಾದ ಭಕ್ತಿಸೇವೆಯ ಹಂತಗಳನ್ನು ಈ ಕೆಳಗೆ ಕೊಟ್ಟಿದೆ. ನೀವು ಆಚರಿಸಲು ಸಾಧ್ಯವಿರುವ ಹಂತವನ್ನು ಆರಿಸಿಕೊಳ್ಳಬಹುದು. ಆ ಹಂತದಲ್ಲಿ

ಭಕ್ತಿಸೇವೆಯನ್ನು ಆಚರಿಸಲು ಅಗತ್ಯವಾದ ಮಾರ್ಗದರ್ಶನವನ್ನು, ಸ್ಫೂರ್ತಿಯನ್ನು ಇಸ್ಕಾನ್ ಒದಗಿಸುತ್ತದೆ ; ಕ್ರಮೇಣ ನೀವು ಮೇಲು ಮೇಲಿನ ಹಂತವನ್ನು ತಲುಪಲು ಸಹಾಯ ಮಾಡುತ್ತದೆ.

**ಶ್ರದ್ಧಾವಾನ್** : ಭಕ್ತಿಸೇವೆಯ ಈ ಕೆಳಗಿನ ನಿಯಮಗಳನ್ನು ಪೂರೈಸುವವರು ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮೀ ನರಸಿಂಹದೇವ, ಶ್ರೀ ಪ್ರಹ್ಲಾದ ಮಹಾರಾಜ ಮತ್ತು ಶ್ರೀಲ ಪ್ರಭುಪಾದರ ಅನುಗ್ರಹವನ್ನು ಪಡೆದು ಶ್ರದ್ಧಾವಾನ್ ಆಗಿ ಕೃಷ್ಣಪ್ರಜ್ಞೆಯನ್ನು ಆಚರಿಸುತ್ತಾರೆ.

- ಕೊನೆಯ ಪಕ್ಷ ಒಂದು ಮಾಲೆ ಹರೇಕೃಷ್ಣ ಮಹಾಮಂತ್ರವನ್ನು ಜಪಿಸುವುದು.
- ಶ್ರೀಲ ಪ್ರಭುಪಾದರ ಪುಸ್ತಕಗಳಲ್ಲಿ ನಿರೂಪಿತವಾಗಿರುವಂತೆ ಭಗವಾನ್ ಕೃಷ್ಣನ ದಿವ್ಯಬೋಧನೆಗಳ ಪಠಣ ಮಾಡುವುದು.
- ದೇವಾಲಯದ ಉತ್ಸವಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು. ಅಂದರೆ, ಸಾಧ್ಯವಾದಷ್ಟು ಸಲ ದೇವಾಲಯಕ್ಕೆ ಹೋಗುವುದು, ಅಲ್ಲಿ ನಡೆಯುವ ಕೃಷ್ಣಪ್ರಜ್ಞಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮುಂತಾದವು.

**************************************************************

**ಕೃಷ್ಣಸೇವಕ** : ಮೇಲೆ ಹೇಳಿದ ಶ್ರದ್ಧಾವಾನ್ ಕರ್ತವ್ಯಗಳನ್ನು ನಿರ್ವಹಿಸುವುದರ ಜೊತೆಗೆ ಈ ಕೆಳಗಿನ ಭಕ್ತಿಸೇವೆಯ ಹಂತದಲ್ಲಿ ನಿರತರಾಗಬೇಕು. ಕೃಷ್ಣಸೇವಕರಾಗಿ ಕೃಷ್ಣಪ್ರಜ್ಞೆಯನ್ನು ಆಚರಿಸಲು ಅವರು ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮೀ ನರಸಿಂಹದೇವ, ಶ್ರೀ ಪ್ರಹ್ಲಾದ ಮಹಾರಾಜ ಮತ್ತು ಶ್ರೀಲ ಪ್ರಭುಪಾದರ ದಿವ್ಯಾನುಗ್ರಹವನ್ನು ಪಡೆಯುತ್ತಾರೆ.

- ಕೊನೆಯ ಪಕ್ಷ ನಾಲ್ಕು ಮಾಲೆ ಹರೇಕೃಷ್ಣ ಮಹಾಮಂತ್ರವನ್ನು ಪ್ರತಿದಿನವೂ ಜಪಿಸುವುದು.
- ಮಾಂಸಾಹಾರವನ್ನು ( ಮಾಂಸ, ಮೀನು ಮತ್ತು ಮೊಟ್ಟೆ ) ವರ್ಜಿಸಿ, ನೀತಿಯುತವಾದ ಜೀವನವನ್ನು ನಡೆಸಲು ಯತ್ನಿಸುವುದು.
- ಭಕ್ತಿಸೇವೆ ಮತ್ತು ಪರಿಶುದ್ಧಿಗಳಲ್ಲಿ ವ್ಯಕ್ತಿಗತವಾಗಿ ಉತ್ತಮಪಡಿಸಿಕೊಳ್ಳಲು ಅವರು ಬದ್ಧರಾಗಿರಬೇಕು. ಪ್ರಭುಪಾದರ ಬೋಧನೆಗಳನ್ನು ಅವರ ಪ್ರತಿನಿಧಿಗಳ ಮಾರ್ಗದರ್ಶನದಲ್ಲಿ ಕ್ರಮೇಣ ತನ್ನ ಬದುಕಿಗೆ ಅನ್ವಯಿಸಿಕೊಳ್ಳಬೇಕು.
- ಭಗವಾನ್ ಶ್ರೀ ಕೃಷ್ಣನೇ ದೇವೋತ್ತಮ ಪರಮ ಪುರುಷ ಎಂಬುದಾಗಿ ಅವರು ಒಪ್ಪಿಕೊಳ್ಳಬೇಕು.
- ಶ್ರೀಕೃಷ್ಣ ಜನ್ಮಾಷ್ಟಮಿ, ರಥಯಾತ್ರಾ ಮೊದಲಾದ ಉತ್ಸವಗಳ ಸಮಯದಲ್ಲಿ ಇಸ್ಕಾನ್ ದೇವಾಲಯದಲ್ಲಿ ಕೃಷ್ಣನ ಭಕ್ತಿಸೇವೆಯಲ್ಲಿ ಸಕ್ರಿಯವಾಗಿ ನಿರತರಾಗಬೇಕು.

*** **ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ** ***

**ಕೃಷ್ಣಸಾಧಕ** : ಮೇಲೆ ಸೂಚಿಸಿದ ಕೃಷ್ಣಸೇವಕನ ಕರ್ತವ್ಯಗಳನ್ನು ಪೂರೈಸುವುದರ ಜೊತೆಗೆ ಈ ಕೆಳಗಿನ ಭಕ್ತಿಸೇವೆಯ ಹಂತದ ಕರ್ತವ್ಯಗಳನ್ನು ನಿರ್ವಹಿಸುವವರು ಕೃಷ್ಣಸಾಧಕರಾಗಿ ಕೃಷ್ಣಪ್ರಜ್ಞೆಯನ್ನು ಆಚರಿಸಲು ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮಿ ನರಸಿಂಹದೇವ, ಶ್ರೀ ಪ್ರಹ್ಲಾದ ಮಹಾರಾಜ ಮತ್ತು ಶ್ರೀಲ ಪ್ರಭುಪಾದರ ಅನುಗ್ರಹವನ್ನು ಪಡೆಯುತ್ತಾರೆ.

- ಅವರು ಪ್ರತಿದಿನವೂ ಎಂಟರಿಂದ ಹನ್ನೆರಡು ಮಾಲೆ ಹರೇಕೃಷ್ಣ ಮಹಾಮಂತ್ರವನ್ನು ಜಪಿಸಬೇಕು.
- ಮಾದಕತೆಯನ್ನು ನಿವಾರಿಸಿಕೊಂಡು, ಅಂದರೆ ಮದ್ಯಪಾನವನ್ನು ತೊರೆದು, ಮಾಂಸಭಕ್ಷಣ, ಜೂಜು ಮತ್ತು ಅಕ್ರಮ ಸಂಭೋಗಗಳನ್ನು ವರ್ಜಿಸಿ ಪವಿತ್ರಜೀವನವನ್ನು ನಡೆಸಬೇಕು.
- ಶ್ರೀಲ ಪ್ರಭುಪಾದರ ಗ್ರಂಥಗಳನ್ನು ಅಧ್ಯಯನ ಮಾಡಬೇಕು, ಇಸ್ಕಾನ್ ನಲ್ಲಿ ನಡೆಯುವ ತರಗತಿಗಳಿಗೆ ಸಾಧ್ಯವಾದಷ್ಟೂ ಹೆಚ್ಚು ಸಲ ಹೋಗಬೇಕು.
- ಪ್ರಯೋಗತಃ ಸಾಧ್ಯವಿರುವಷ್ಟು ಮಟ್ಟಿಗೆ ಮನೆಯಲ್ಲಿ ಪೂಜಾವೇದಿಕೆಯನ್ನು ಸಿದ್ಧಪಡಿಸಿ, ಶ್ರೀಕೃಷ್ಣನನ್ನು ಪೂಜಿಸಬೇಕು. ಆರತಿ ಮಾಡಿ, ಆಹಾರವನ್ನು ಸಮರ್ಪಿಸಬೇಕು. ಪವಿತ್ರ ತುಳಸಿ ಗಿಡವನ್ನು ಪೂಜಿಸಬೇಕು. ಬೆಳಗ್ಗೆ ಬೇಗ ಏಳುವುದೇ ಮೊದಲಾದ ಮುಖ್ಯ ಸಾಧನೆಗಳನ್ನು ಅನುಸರಿಸಬೇಕು.
- ಏಕಾದಶಿಯ ದಿನ ಮತ್ತು ವೈಷ್ಣವ ಪಂಚಾಂಗದಲ್ಲಿ ಸೂಚಿಸಿರುವಂತೆ ಉತ್ಸವದ ದಿನಗಳಂದು ಉಪವಾಸವನ್ನಾಚರಿಸಬೇಕು.
- ಶ್ರೀಲ ಪ್ರಭುಪಾದರ ಬೋಧನೆಯಂತೆ, ಅವರ ಪ್ರತಿನಿಧಿಗಳ ಮಾರ್ಗದರ್ಶನದಲ್ಲಿ ಕ್ರಮೇಣ ಭಕ್ತಿಯೋಗವನ್ನು ಕಲಿತು ಆಚರಿಸುತ್ತಾ ಭಕ್ತಿಯುತ ಜೀವನವನ್ನು ನಡೆಸಲು ಬದ್ಧರಾಗಿರಬೇಕು.

**************************************************************

**ಕೃಷ್ಣ ಉಪಾಸಕ** : ಮೇಲೆ ಸೂಚಿಸಿದ ಕೃಷ್ಣಸಾಧಕನ ಕರ್ತವ್ಯಗಳನ್ನು ಪೂರೈಸುವುದರ ಜೊತೆಗೆ ಈ ಕೆಳಗಿನ ಭಕ್ತಿಸೇವೆಯ ಹಂತದ ಕರ್ತವ್ಯಗಳನ್ನು ನಿರ್ವಹಿಸುವವರು ಕೃಷ್ಣ ಉಪಾಸಕರಾಗಿ ಕೃಷ್ಣ ಪ್ರಜ್ಞೆಯನ್ನು ಆಚರಿಸಲು ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮಿ ನರಸಿಂಹ ದೇವ, ಶ್ರೀ ಪ್ರಹ್ಲಾದ ಮಹಾರಾಜ ಮತ್ತು ಶ್ರೀಲ ಪ್ರಭುಪಾದರ ಅನುಗ್ರಹವನ್ನು ಪಡೆಯುತ್ತಾರೆ.

- ಪ್ರತಿದಿನವೂ ಹನ್ನೆರಡರಿಂದ ಹದಿನಾರು ಮಾಲೆ ಹರೇಕೃಷ್ಣ ಮಹಾಮಂತ್ರವನ್ನು ಜಪಿಸಬೇಕು.
- ಪ್ರತಿದಿನವೂ ತುಳಸಿದೇವಿಯನ್ನು ಅರ್ಚಿಸುವುದು.
- ಗೌಡೀಯ ಪರಂಪರೆಯ ಆಚಾರ್ಯಗಳನ್ನು ಒಪ್ಪಿಕೊಂಡು ಅವರನ್ನು ಅನುಸರಿಸುವುದು.
- ಈ ಆಚಾರ್ಯರುಗಳ ಜನ್ಮದಿನ ಮತ್ತು ಪುಣ್ಯ ತಿಥಿ ದಿನಗಳಂದು ವೈಷ್ಣವ ಪಂಚಾಂಗದಲ್ಲಿ ಕೊಟ್ಟಿರುವಂತೆ ಉಪವಾಸವನ್ನು ಆಚರಿಸುವುದು.

- ವೈಷ್ಣವ ಪಂಚಾಂಗದಲ್ಲಿ ಕೊಟ್ಟಿರುವಂತೆ ಭಗವಂತನ ಜನ್ಮದಿನಗಳಂದು ಉಪವಾಸವನ್ನು ಆಚರಿಸುವುದು.

*** **ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ** ***

**ಶ್ರೀಲ ಪ್ರಭುಪಾದ ಆಶ್ರಯ** : ಮೇಲೆ ಹೇಳಿದಂತೆ ಕೃಷ್ಣ ಉಪಾಸಕರ ಕರ್ತವ್ಯಗಳನ್ನು ನಿರ್ವಹಿಸುವುದರ ಜೊತೆಗೆ ಈ ಕೆಳಗೆ ಕೊಟ್ಟಿರುವ ಹೆಚ್ಚಿನ ಭಕ್ತಿಸೇವೆಯ ಕಾರ್ಯಗಳನ್ನು ನಿರ್ವಹಿಸುತ್ತಾ ನಡೆದರೆ ಶ್ರೀಲ ಪ್ರಭುಪಾದರ ಆಶ್ರಯ ಪಡೆದು ಕೃಷ್ಣಪ್ರಜ್ಞೆಯನ್ನು ಆಚರಿಸಲು ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮಿ ನರಸಿಂಹದೇವ, ಶ್ರೀ ಪ್ರಹ್ಲಾದ ಮಹಾರಾಜ ಮತ್ತು ಶ್ರೀಲ ಪ್ರಭುಪಾದರ ಅನುಗ್ರಹವನ್ನು ಪಡೆಯುತ್ತಾರೆ.

- ಪ್ರತಿದಿನವೂ ಕೊನೆಯ ಪಕ್ಷ ಹದಿನಾರು ಮಾಲೆ ಹರೇಕೃಷ್ಣ ಮಹಾಮಂತ್ರವನ್ನು ಜಪಿಸಬೇಕು.
- ಮಾದಕತೆಯನ್ನು ಸಂಪೂರ್ಣವಾಗಿ ನಿವಾರಿಸಿಕೊಂಡು ಕಾಫಿ, ಟೀ ಕೂಡಾ ವರ್ಜಿಸಿ, ಮಾಂಸಭಕ್ಷಣ, ಜೂಜು, ಸಿನಿಮಾ, ಕ್ರೀಡೆಗಳು, ಅಕ್ರಮ ಸಂಭೋಗ ಇತ್ಯಾದಿಗಳೆಲ್ಲವನ್ನೂ ಸಂಪೂರ್ಣವಾಗಿ ತೊರೆಯಬೇಕು. ಈರುಳ್ಳಿ ಮತ್ತು ಬೆಳ್ಳುಳ್ಳಿಗಳನ್ನು ಸೇವಿಸಬಾರದು.
- ಕೃಷ್ಣಪ್ರಜ್ಞಾ ತತ್ವದ ಮೂಲಾಂಶಗಳಲ್ಲಿ ಪರಿಣತಿ ಪಡೆದಿರಬೇಕು. ಶ್ರೀಲ ಪ್ರಭುಪಾದರ ಕೃತಿಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುತ್ತಾ ಇತರರಿಗೆ ( ತಮ್ಮ ಶಕ್ತಿಯಿರುವಷ್ಟು ಮಟ್ಟಿಗೆ ) ಕೃಷ್ಣಪ್ರಜ್ಞೆಯ ವಿಷಯವಾಗಿ ಬೋಧಿಸುತ್ತಾ ಸಕ್ರಿಯವಾಗಿ ಭಕ್ತಿಸೇವೆಯನ್ನು ಆಚರಿಸಬೇಕು.
- ಮನೆಯಲ್ಲಿ ಕಟ್ಟುನಿಟ್ಟಾದ ಸಾಧನ ಕಾರ್ಯಕ್ರಮವನ್ನು ಹಾಕಿಕೊಂಡು ಬೆಳಗ್ಗೆ ಬೇಗ ಎದ್ದು ಸಾಧ್ಯವಾದ ಮಟ್ಟಿಗೆ, ದೇವಾಲಯದಲ್ಲಿ ಹೇಗೋ ಹಾಗೆಯೇ, ನಿಗದಿತ ಕಾರ್ಯಕ್ರಮದಂತೆ ನಡೆಯಬೇಕು. ಕೊನೆಯ ಪಕ್ಷ ವಾರಕೊಮ್ಮೆ ದೇವಾಲಯದಲ್ಲಿ ನಡೆಯುವ ಭಾಗವತ ತರಗತಿಯಲ್ಲಿ ಭಾಗವಹಿಸಬೇಕು.

************************************************************

**ಶ್ರೀ ಗುರುಚರಣ ಆಶ್ರಯ** : ಮೇಲೆ ಹೇಳಿದ ಶ್ರೀಲ ಪ್ರಭುಪಾದ ಆಶ್ರಯದ ಕರ್ತವ್ಯಗಳನ್ನು ನಿರ್ವಹಿಸುತ್ತಾ ಈ ಕೆಳಗೆ ಕೊಟ್ಟಿರುವ ಭಕ್ತಿಸೇವೆಯ ಮುಂದಿನ ಹಂತದ ಕಾರ್ಯಗಳನ್ನು ಮಾಡುವ ಭಕ್ತರು ಶ್ರೀ ಗುರುಚರಣ ಆಶ್ರಯನಾಗಿ ಕೃಷ್ಣಪ್ರಜ್ಞೆಯನ್ನು ಆಚರಿಸಲು ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮಿ ನರಸಿಂಹದೇವ, ಶ್ರೀ ಪ್ರಹ್ಲಾದ ಮಹಾರಾಜರ ಮತ್ತು ಶ್ರೀಲ ಪ್ರಭುಪಾದರ ಅನುಗ್ರಹವನ್ನು ಪಡೆಯುತ್ತಾರೆ.

- ಶ್ರೀಲ ಪ್ರಭುಪಾದ ಆಶ್ರಯ ಹಂತದ ಸಾಧನೆಗಳನ್ನು ಕನಿಷ್ಠ ಆರು ತಿಂಗಳ ಕಾಲ ನಡೆಸಬೇಕು ; ದೇವಾಲಯದ ಅಧ್ಯಕ್ಷರಿಂದ ಒಂದು ಶಿಫಾರಸನ್ನು ಪಡೆಯಬೇಕು.
- ಇಸ್ಕಾನ್ ನಲ್ಲಿರುವ ಒಬ್ಬ ಅಧಿಕೃತ ಗುರುವಿನಲ್ಲಿ ಹೆಚ್ಚಿನ ನಂಬಿಕೆ, ಶ್ರದ್ಧೆಗಳನ್ನು ಬೆಳೆಸಿಕೊಂಡು ಅವರಿಗೆ ಶರಣಾಗಬೇಕು.

- ಈ ಆಶ್ರಯಕ್ಕಾಗಿ ಇಸ್ಕಾನ್ ಶಾಸನಗಳ ಪ್ರಕಾರ ನಡೆಸುವ ಒಂದು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅರ್ಹತೆ ಪಡೆಯಬೇಕು.

*** ***ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ*** ***

## ಶಿಕ್ಷಾ ಸಮಾರಂಭವೆಂದರೇನು ?

ಈ ಸಮಾರಂಭದಲ್ಲಿ ಭಕ್ತರು :

೧. ತಮ್ಮ ಮನೆಗಳಲ್ಲಿ ಆಧ್ಯಾತ್ಮಿಕ ಜೀವನವನ್ನು ನಡೆಸಲು ಶ್ರೀ ಶ್ರೀ ಜಗನಾಥ ಬಲದೇವ ಸುಭದ್ರ, ಶ್ರೀ ಶ್ರೀ ಗೌರ ನಿತಾಯ್, ಶ್ರೀ ಶ್ರೀ ಲಕ್ಷ್ಮಿ ನರಸಿಂಹದೇವ, ಶ್ರೀ ಪ್ರಹ್ಲಾದ ಮಹಾರಾಜ ಮತ್ತು ಶ್ರೀಲ ಪ್ರಭುಪಾದರ ವಿಶೇಷ ಆಶೀರ್ವಾದ ಪಡೆಯಲು ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ.
೨. ಶ್ರೀಲ ಪ್ರಭುಪಾದರ ಬೋಧನೆಗಳ ಅಥವಾ ಸಲಹೆಗಳ ಪ್ರಕಾರ ಅನೇಕ ಹಂತಗಳಲ್ಲಿ ಕೃಷ್ಣಪ್ರಜ್ಞೆಯ ತತ್ವಗಳನ್ನು ಕಟ್ಟುನಿಟ್ಟಾಗಿ ಆಚರಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ.

ಈ ಸಮಾರಂಭದಲ್ಲಿ ಶ್ರೀಲ ಪ್ರಭುಪಾದರನ್ನು ತಮ್ಮ ಶಿಕ್ಷಾಗುರುವೆಂದು ಸ್ವೀಕರಿಸುತ್ತಾರೆ ಮತ್ತು ಅವರ ಬೋಧನೆಗನುಸಾರವಾಗಿ ಆಧ್ಯಾತ್ಮ ಜೀವನ ನಡೆಸಲು ಒಪ್ಪುತ್ತಾರೆ.

## ಶಿಕ್ಷಾ ಸಮಾರಂಭದಲ್ಲಿ ನೀವು ಭಾಗವಹಿಸುವುದು ಹೇಗೆ ?

ಶಿಕ್ಷಾ ಸಮಾರಂಭವು ಪ್ರತಿ ನಾಲ್ಕು ತಿಂಗಳಿಗೊಮ್ಮೆ ಇಸ್ಕಾನ್ ಶ್ರೀ ಜಗನ್ನಾಥ ಮಂದಿರದಲ್ಲಿ ನಡೆಯುತ್ತದೆ. ಆಸಕ್ತಿಯುಳ್ಳ ಭಕ್ತರು ದೇವಸ್ಥಾನದಲ್ಲಿನ ಕೌಂಟರಿನಲ್ಲಿ ವಿಚಾರಿಸಬಹುದು ಅಥವಾ ನೀವು ಭಾಗವಹಿಸುತ್ತಿರುವ ಭಕ್ತಿವೃಕ್ಷದ ಭಕ್ತದಾಸರಿಂದ ಕೇಳಿ ತಿಳಿಯಬಹುದು. ದಯವಿಟ್ಟು ಪ್ರತಿಯೊಂದು ಹಂತದ ಶಿಕ್ಷಾಗಾಗಿ ನಿಗದಿಪಡಿಸಿರುವ ನಿಯಮಗಳನ್ನು ಓದಿರಿ ಮತ್ತು ನೀವು ಅರ್ಹರಾಗಿದ್ದೀರೆಂದು ಖಚಿತ ಪಡಿಸಿಕೊಳ್ಳಿರಿ. ಪ್ರತಿಯೊಬ್ಬ ಭಕ್ತನಿಗೂ " ಶ್ರದ್ಧಾವಾನ್ " ಮಟ್ಟವು ಪ್ರವೇಶದ ಹಂತವಾಗಿರುತ್ತದೆ. ಎಲ್ಲಾ ರೀತಿಯಲ್ಲೂ ಅರ್ಹತೆ ಹೊಂದಿರುವ ಅದೃಷ್ಟವಂತ ಭಕ್ತರು ಶಿಕ್ಷಾ ಸಮಾರಂಭದಲ್ಲಿ ಭಾಗವಹಿಸುತ್ತಾರೆ.

ಈ ಮೇಲಿನ ಶಿಕ್ಷಾ ಸಮಾರಂಭವು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಲಿದೆ. ಎಷ್ಟೋ ಭಕ್ತರು ಈ ಶಿಕ್ಷಾ ಸಮಾರಂಭದಲ್ಲಿ ಭಾಗವಹಿಸಿ ಭಗವತ್ ಸೇವೆಯ ಮೂಲಕ ತಮ್ಮ ಜೀವನವನ್ನು

ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ. ತಾವೂ ಸಹ ಈ ಶಿಕ್ಷಾ ಸಮಾರಂಭದಲ್ಲಿ ಭಾಗವಹಿಸಿ, ಶ್ರೀ ಶ್ರೀ ಜಗನ್ನಾಥ ಬಲದೇವ ಸುಭದ್ರ ಮತ್ತು ಶ್ರೀಲ ಪ್ರಭುಪಾದರ ಆಶ್ರಯ ಪಡೆದುಕೊಳ್ಳಬೇಕಾಗಿ ಕೋರಿಕೆ.

**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ।**
**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ॥**